# Telephone Conversation between PM and President of Republic of Korea

April 09, 2020

## ಪ್ರಧಾನ  ಮಂತ್ರಿ ಮತ್ತು ಕೊರಿಯಾ ಗಣರಾಜ್ಯದ ಅಧ್ಯಕ್ಷರ ನಡುವಿನ ದೂರವಾಣಿ ಸಂಭಾಷಣೆ

ಏಪ್ರಿಲ್ 09, 2020

ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಯವರು ಕೊರಿಯಾ ಗಣರಾಜ್ಯದ ಅಧ್ಯಕ್ಷ ಶ್ರೀಷ್ಠ  ಮೂನ್ ಜೇ-ಇನ್  ರೊಂದಿಗೆ ಇಂದು ದೂರವಾಣಿ  ಸಂಭಾಷಣೆ  ನಡೆಸಿದರು.

ಕಳೆದ ವರ್ಷ ಕೊರಿಯಾ ಗಣರಾಜ್ಯಕ್ಕೆ ಭೇಟಿ ನೀಡಿದ್ದನ್ನು ಪ್ರಧಾನ ಮಂತ್ರಿ ಮೋದಿಯವರು ನೆನಪಿಸಿಕೊಂಡರು ಮತ್ತು ಎರಡು ದೇಶಗಳ ನಡುವೆ ಹೆಚ್ಚುತ್ತಿರುವ ನಿಕಟ ಸಂಬಂಧದ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿದರು.

ಕೋವಿಡ್-19 ಜಾಗತಿಕ ಸಾಂಕ್ರಾಮಿಕ ರೋಗ  ಮತ್ತು ಜಾಗತಿಕ ಆರೋಗ್ಯ ವ್ಯವಸ್ಥೆಗಳು ಹಾಗೂ ಆರ್ಥಿಕ ಪರಿಸ್ಥಿತಿಗೆ ಅದು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಇಬ್ಬರು ನಾಯಕರು ಚರ್ಚಿಸಿದರು. ಸಾಂಕ್ರಾಮಿಕ ರೋಗವನ್ನು ನಿಭಾಯಿಸಲು ಅವರು ತಮ್ಮ ದೇಶಗಳಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು.

ಬಿಕ್ಕಟ್ಟನ್ನು ನಿರ್ವಹಿಸಲು ಕೊರಿಯಾ ಗಣರಾಜ್ಯ ನಿಯೋಜಿಸಿರುವ ತಂತ್ರಜ್ಞಾನ ಆಧಾರಿತ ಪ್ರತಿಕ್ರಿಯೆಗೆ ಪ್ರಧಾನ ಮಂತ್ರಿಯವರು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಂಕ್ರಾಮಿಕ ರೋಗವನ್ನು ಹೋರಾಡುವ ಉದ್ದೇಶದಿಂದ ಭಾರತೀಯ ಅಧಿಕಾರಿಗಳು ಅಪಾರ ಭಾರತೀಯ ಜನಸಂಖ್ಯೆಯನ್ನು ಪ್ರೇರೇಪಿಸಿದ ರೀತಿಯನ್ನು ಅಧ್ಯಕ್ಷ ಮೂನ್ ಜೇ-ಇನ್ ಪ್ರಶಂಸಿಸಿದರು.

ಭಾರತದ ಕೊರಿಯನ್ ನಾಗರಿಕರಿಗೆ ಭಾರತೀಯ ಅಧಿಕಾರಿಗಳು ನೀಡುತ್ತಿರುವ ಬೆಂಬಲಕ್ಕಾಗಿ ಕೊರಿಯನ್ ಅಧ್ಯಕ್ಷರು ಪ್ರಧಾನ ಮಂತ್ರಿ  ಯವರಿಗೆ ಧನ್ಯವಾದ ಅರ್ಪಿಸಿದರು.

ಭಾರತೀಯ ಕಂಪನಿಗಳ  ಮೂಲಕ ವೈದ್ಯಕೀಯ ಉಪಕರಣಗಳ ಸರಬರಾಜು ಮತ್ತು ಸಾಗಣೆಗೆ ಅನುಕೂಲ ಮಾಡಿಕೊಟ್ಟಿದ್ದಕ್ಕಾಗಿ ಪ್ರಧಾನ ಮಂತ್ರಿ ಆರ್‌ಒಕೆ ಸರ್ಕಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಕೋವಿಡ್-19 ಗಾಗಿ ಪರಿಹಾರಗಳನ್ನು ಸಂಶೋಧಿಸುತ್ತಿರುವುದರಿಂದ ತಮ್ಮ ತಜ್ಞರು ಪರಸ್ಪರ ಸಮಾಲೋಚಿಸುವುದು ಮತ್ತು ಅನುಭವಗಳನ್ನು ಹಂಚಿಕೊಳ್ಳುವುದು ಮುಂದುವರಿಯುತ್ತದೆ ಎಂದು ಇಬ್ಬರು ನಾಯಕರು ಒಪ್ಪಿಕೊಂಡರು.

ಆರ್‌ಒಕೆ ನಲ್ಲಿ ಮುಂಬರುವ ರಾಷ್ಟ್ರೀಯ ವಿಧಾನಸಭಾ ಚುನಾವಣೆಗೆ ಅಧ್ಯಕ್ಷ ಮೂನ್ ರವರಿಗೆ ಪ್ರಧಾನ ಮಂತ್ರಿ  ಯವರಿಗೆ ಶುಭಾಶಯಗಳನ್ನು ತಿಳಿಸಿದರು.

**ನವ ದೆಹಲಿ**
**ಏಪ್ರಿಲ್ 09, 2020**

DISCLAIMER: This is an approximate translation. The original is available in English on MEA’s website and may be referred to as the official press release.